> ರಹಸ್ಯ ಬಯಕೆಗಳೂ ಕೂಡಾ ತೊಟ್ಟು ಕಳಚಿ ನೆಲಕ್ಕುದುರಿದ ಹೂವಿನಂತೆ ಭ್ರಮೆ ಕಳಚಿ ತಳ ಕಚ್ಚಿ ಗರ್ಭದೊಳಗೆ ತಟಸ್ಥವಾಗುಳಿದು ನಿರಂತರ ಪೀಡಿಸಿದ್ದು ಇದೀಗ ಸಲೀಸಾಗಿ ನಿಟ್ಟುಸಿರಿನೊಂದಿಗೆ ಪ್ರಕಟಗೊಳ್ಳುತ್ತಿದೆಯೇ?

ಪರ್ಸಿನಿಂದ ಕೀ ಹುಡುಕಿ ಮೃದುವಾಗಿ ಮನೆಯ ಬಾಗಿಲು ತೆಗೆಯುತ್ತಾ ಮಾತನ್ನು ಯೋಚಿಸಿ, ಯೋಚಿಸಿ ಪೋಣಿಸಿದಂತೆ ನುಡಿದಳು. ಅವಳ ಮಾತಿನಿಂದ ಸ್ವಲ್ಪ ಆಶ್ಚರ್ಯವಾದರೂ ತೋರಗೊಡಲಿಲ್ಲ. 'ಹೇಗಿದ್ದೀ?' ಕೇಳಬೇಕೆಂದಿದ್ದ ಮಾತು ಯಾಕೋ ಗಂಟಲಿನಾಚೆ ಬರುವ ಸಾಹಸ ಮಾಡಲಿಲ್ಲ.

'ನೀ ಬೆಂಗ್ಳೂರಿನಲ್ಲೇ ಕೆಲ್ಸದಲ್ಲಿದೀಯಾಂತಾ ಗೊತ್ತಿತ್ತು. ತುಂಬಾ ತಡವಾಗಿ ಮದ್ವೆ ಮಾಡ್ಕಂಡೇಂತಾ ಕೇಳ್ದೆ. ಕಡಿಗಾದ್ರೂ ಮಾಡ್ಕಂಡ್ಯಲಾ ಸದ್ಯ. ಆದ್ರೆ ಹಿಂಗೆ ಅಕಸ್ಮಾತ್ತಾಗಿ ಸಿಗ್ತಿ ಅಂದ್ಕಂಡಿರ್ಲಿಲ್ಲ ಮಾರಾಯ.'

ಮೆಟ್ರೊ ಸ್ಟೇಷನ್‌ಗೆ ಸಮೀಪದಲ್ಲಿದ್ದ ಬೃಹತ್ ಅಪಾರ್ಟ್‌ಮೆಂಟ್. ಪಕ್ಕದಲ್ಲೆ ಹರಿದು ಹೋಗುತ್ತಿರುವ ಮೆಟ್ರೊಗಳ ಎಡೆಬಿಡದ ಸದ್ದುಗಳು. ಬಹುಶಃ ಬಹಳ ಮುಂದಾಲೋಚನೆಯಿರುವ ಗಂಡನೇ ಇರಬೇಕು. ಇಂತಹ ಜಾಗದಲ್ಲಿ ಫ್ಲ್ಯಾಟ್ ಅಂದರೆ ಸಾಕಷ್ಟೇ ಕೊಟ್ಟಿರಬೇಕಲ್ಲವೇ? ಏಳನೇ ಮಜಲಿನಲ್ಲಿ ಲಿಫ್ಟ್ ದಾಟಿ ಹೊರಬಂದರೆ ಎದುರಿಗೇ ಮನೆ. ತೆರೆದ ಬಾಗಿಲು ಹಾದು ಒಳಗಡಿಯಿಟ್ಟರೆ ವಿಶಾಲವಾದ ಹಾಲ್. ಹಾಲಿನಲ್ಲೂ ಅಷ್ಟೇ, ಎಲ್ಲವೂ ಸುಸಜ್ಜಿತ. ಮನೆಯಲ್ಲಿರುವ ಒಂದೊಂದು ವಸ್ತುವೂ ಅತ್ಯಂತ ದುಬಾರಿಯಾಗಿ ಕಾಣಿಸುತ್ತಿದೆ. ಹಾಲಿಗೆ ತಾಗಿಕೊಂಡೇ ಇರುವ ಫ್ರೆಂಚ್ ಬಾಲ್ಕನಿಯಲ್ಲಿ ಬೆಂಗಳೂರು ಅತ್ಯಂತ ಸುಂದರವಾಗಿ ಕಾಣುತ್ತಿತ್ತು.

'ಎನ್ ತೆಕ್ಕೋತಿ ಹೇಳ್? ಊಟ ಮಾಡಿಯೇ ಹೋಗ್ಬೇಕು ಆಯ್ತಾ?' ಗಾಜಿನ ದೊಡ್ಡ ಗ್ಲಾಸಿನಲ್ಲಿ ನೀರು ತಂದು ಮುಂದಿಟ್ಟಳು. 'ಗಂಡ ಹೋಗಿ ಒಂದೂವರೆ ವರ್ಷವಾಯ್ತು. ಒಬ್ಳೇ ಇದ್ದೇನೆ.' ಎಂದು ಶಾಕ್ ಕೊಟ್ಟಳು. ಮದುವೆಯಾಗಿ ಎಲ್ಲೋ ದೂರದ ಆಫ್ರಿಕಾದಲ್ಲಿದ್ದಾಳೆಂದು ಆನಂತರ ಯಾರೋ ಹೇಳಿ ಗೊತ್ತಾಗಿತ್ತು. ಆಫ್ರಿಕಾದ ಯಾವ ದೇಶದಲ್ಲಿದ್ದಾಳೆಂದು ವಿಷಯ ತಿಳಿಸಿದವರು ಹೇಳಿರಲಿಲ್ಲವೋ, ನಾನೇ ಕೇಳಿ ತಿಳಿದುಕೊಂಡಿರಲಿಲ್ಲವೋ ನೆನಪಿಲ್ಲ.

'ಮಗ್ಳು ಓದಲು ಅಮೆರಿಕಕ್ಕೆ ಹೋದವ್ಳು ಅಲ್ಲಿಯವ್ರನ್ನೆ ಮದ್ವೆಯಾಗಿ ಅಮೆರಿಕದಲ್ಲೇ ಸೆಟಲ್ ಆಗಿದ್ದಾಳೆ. ಮಗ ಜರ್ಮನಿಯಲ್ಲಿ ಓದ್ತಿದಾನೆ. ನನ್ನ ಮಕ್ಳಲ್ಲಾಂತಾ ನಿಂಗೂ ಗೊತ್ತಲ್ಲ? ಗಂಡನ ಮಕ್ಳು. ಹಾಗೇ ನನ್ನ ಮಕ್ಳೂ ಕೂಡಾ!'

ಒಂದು ಕ್ಷಣ ಏನೂ ಅರ್ಥವಾಗಲಿಲ್ಲ. ನನ್ನ ಮುಖಭಾವ ಏನಿತ್ತೋ? ಅರ್ಥವಾದವಳಂತೆ ಸುದೀರ್ಘ ಉಸಿರು ಎಳೆದುಕೊಂಡು, ಮೆಲ್ಲಗೆ ಅಂದಳು:

'ಬಹುಶಃ ನಿಂಗೀಗ ಯೆಲ್ಲಾ ಮರ್ತೋಗಿದ್ಯೋ ಏನೋ? ನನ್ನ ಮದ್ವೆ ಏಕಾಏಕಿ ನಡೆದಿದ್ದಲ್ಲ ಅನ್ನೋದು ನಿಂಗೂ ಗೊತ್ತಿತ್ತು, ಅಲ್ವಾ ಕೇಶವಾ?'

ದಿಢೀರನೆ ಬಂದ ಪ್ರಶ್ನೆಗೆ ಏನು ಉತ್ತರಿಸಬೇಕೋ ತಿಳಿಯಲಿಲ್ಲ. ಮೂವತ್ತು ವರುಷಗಳ ಹಿಂದಿನ ಘಟನೆ! ನಾನೇ ಮರೆತಿದ್ದೇನೇ ಅಥವಾ ಉದ್ದೇಶಪೂರ್ವಕವಾಗಿ ಮರೆವಿಗೆ ದಬ್ಬಿದ್ದೇನೇ ನೆನಪಿಗೆ ಬರುತ್ತಿಲ್ಲ. ಗತಗಾಲವನ್ನು ಕೆದಕಿ ಏನಾದರೂ ಉತ್ತರ ಕೊಟ್ಟೇ ತೀರಬೇಕೆನ್ನುವ ಹಟವೂ